ಕಿರುನೀರು ಸರಬರಾಜು ರಾಜ್ಯ
ಯೋಜನೆಗಳು ಕೇಂದ್ರ - ಎಸ್. ಸಿಸ.ಪಿ.

1. ಗುಟ್ಟಿ
2. ಸೋನಟ್ಟಿ

ವಿಷಯ : ಬೀದರ್ ಜಿಲ್ಲೆಯಲ್ಲಿ ನೀಡಲಾದ ಹಸಿರು ಕಾರ್ಡುಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 450 (245)

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು (ಬಸವಕಲ್ಯಾಣ) :- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. ಇಲ್ಲಿಯವರೆಗೆ ಬೀದರ್ ಜಿಲ್ಲೆಯಲ್ಲಿ ನೀಡಲಾದ ಹಸಿರು ಕಾರ್ಡುಗಳ ಸಂಖ್ಯೆ ಎಷ್ಟು?

2. ಇವುಗಳಲ್ಲಿ ಬಸವಕಲ್ಯಾಣದಲ್ಲಿರುವುವು ಎಷ್ಟು ?

3. ಹೆಚ್ಚುವರಿ ಹಸಿರು ಕಾರ್ಡುಗಳನ್ನು ನೀಡಲಾಗಿದೆಯೆ ?

4. ಹಾಗಿದ್ದಲ್ಲಿ, ತಾಲ್ಲೂಕುವಾರು ವಿವರಗಳನ್ನು ನೀಡುವುದು.

5. ಬಸವಕಲ್ಯಾಣ ತಾಲ್ಲೂಕಿನಲ್ಲಿ ಬಡಜನರ ಸಂಖ್ಯೆಯ ಆಧಾರದ ಮೇಲೆ ಹಸಿರು ಕಾರ್ಡುಗಳನ್ನು ನೀಡಲಾಗಿದೆ.

6. ಹಾಗಿದ್ದಲ್ಲಿ, ಬಸವಕಲ್ಯಾಣ ತಾಲ್ಲೂಕಿನಲ್ಲಿ ಹಸಿರು ಕಾರ್ಡುಗಳ ಕೋಟಾ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ. ಬಿ. ಸ್. ಪಾಟೀಲ್. (ಸಾಸನೂರು) (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :-

1. 1,81,976

2. 36,114

3. ಹೌದು, 95,415 ಹೆಚ್ಚುವರಿ ಹಸಿರು : ತ್ರಿವರ್ಣ ಪಡಿತರ ಚೀಟಿಗಳು

4. ತಾಲ್ಲೂಕು ವಿವರಗಳನ್ನು ಲಗತ್ತಿಸಿದೆ.

5. ಹಸಿರು : ತ್ರಿವರ್ಣ ಪಡಿತರ ಚೀಟಿಗಳನ್ನು ಆದಾಯದ ಆಧಾರದ ಮೇಲೆ ನೀಡಲಾಗುತ್ತಿದೆ.

6. ಈ ಪಡಿತರ ಚೀಟಿಗಳನ್ನು ವಾರ್ಷಿಕ ಆದಾಯ ರೂ. 6400-00 ಕ್ಕಿಂತ ಕಡಿಮೆಯಿರುವ ಕುಟುಂಬಗಳಿಗೆ ನೀಡಲಾಗುತ್ತಿದ್ದು ತಾಲ್ಲೂಕುಗಳಲ್ಲಿ ಹಸಿರು : ತ್ರಿವರ್ಣ ಪಡಿತರ ಚೀಟಿಗಳನ್ನು ನೀಡಲು ಗರಿಷ್ಠ ಮಿತಿ ನಿಗದಿಸಿಲ್ಲ.

Replies to sub-question (d) of Un-starred Qn. No: 245 indicating the details of taluk-wise tricolour card/green cards in Bidar Dt.

Name of Taluk	No. of green card originally existed	No.of tricolour card replaced with greencard	Additional tricolour cards issued
Aurad	17,947	35,209	17,262
Bhalki	17,266	33,895	16,629
Basavakalyana	18,786	36,114	17,328
Humnabad	15,951	42,580	26,629
Bidar	16,611	34,178	17,567
Total	86,561	1,81,976	95,415

ವಿಷಯ : ದೂರವಾಣಿ ಕದ್ದಾಲಿಕೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 451 (244)

ಶ್ರೀ. ಬಸವರಾಜ್ ಪಾಟೀಲ್ ಆಟ್ಟೂರ್ (ಬಸವಕಲ್ಯಾಣ) :- ಮಾನ್ಯ ಗೃಹ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೋಲೀಸ್ ಇಲಾಖೆಯ ಗಣ್ಯವ್ಯಕ್ತಿಗಳ, ಕೆಲವು ಮಂತ್ರಿಗಳ ಮತ್ತು ಪ್ರಮುಖ ವ್ಯಕ್ತಿಗಳ ದೂರವಾಣಿ ಕದ್ದಾಲಿಕೆ ಮಾಡುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಸರ್ಕಾರವು ಸಿ.ಬಿ. ಐ. ಗೆ : ವಹಿಸಲು ಕ್ರಮ ತೆಗೆದುಕೊಂಡಿದೆಯೇ ?

ಇ) ಸರ್ಕಾರವು ಅಂಚೆ ಮತ್ತು ಟೆಲಿಫೋನ್ ಇಲಾಖೆಗೆ ಪತ್ರ ಬರೆದು ಮುಖ್ಯ ವ್ಯಕ್ತಿಗಳ ದೂರವಾಣಿ ಕದ್ದಾಲಿಸಲು ಸೂಚಿಸಿದೆಯೆ ?

ಶ್ರೀ. ಬೌಡರೆಡ್ಡಿ (ಗೃಹ ಸಚಿವರು) :-

ಅ) ಇಲ್ಲ.